**ದಿನಾಂಕಃ 17-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ಪರ **ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ಅನುತ್ತೀರ್ಣನಾಗಿರುತ್ತೇನೆ. ನಾನು ಒಂದು ಎಲೆಕ್ಟ್ರಾನಿಕ್ಸ್ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ಅದಕ್ಕೆ ಲೈಸೆನ್ಸ್ ಹಾಗೂ ರಿಜಿಸ್ಟ್ರೇಷನ್ ಪಡೆದಿರುತ್ತೇನೆ. ಅದನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ. ನಾನು ಎಲೆಕ್ಟ್ರಾನಿಕ್ಸ್ ವ್ಯವಹಾರವನ್ನು ರಿಜಿಸ್ಟ್ರೇಷನ್ ಫಾರಂ ಮುಖಾಂತರ ಮಾಡುತ್ತೇನೆ. ನನ್ನ ಜೊತೆ ಯಾವುದೇ ಪಾಲುದಾರರು ಇರುವುದಿಲ್ಲ. ಜಿ ಎಸ್ ಟಿ ಸಹ ಕಟ್ಟುತ್ತೇನೆ. ಎಲ್ಲಾ ವ್ಯವಹಾರದ ರಸೀದಿಗಳನ್ನು ಇಟ್ಟಿರುತ್ತೇನೆ. ಎಲ್ಲಾ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ಮಾಡುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಪ್ರತಿವಾದಿ ನಾನು ಸಣ್ಣವನಿರುವಾಗಿನಿಂದಲೂ ಪರಿಚಯವಿರುತ್ತಾರೆ. ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ಅವರ ಮಕ್ಕಳು ಕೆಲಸದಲ್ಲಿ ಇರಬಹುದು. ಅವರ ದೊಡ್ಡ ಮಗಳು ಮೂಡಬಿದ್ರೆ ಕಾಲೇಜಿನಲ್ಲಿ ಓದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಅವರ ಮಗಳ ಕಾಲೇಜಿನ ಶುಲ್ಕಕ್ಕಾಗಿ ನಿಮ್ಮ ಹತ್ತಿರ ಹಣವನ್ನು ಕೇಳಿರುತ್ತಾರೆಂದರೆ ಸಾಕ್ಷಿ ಅವರ ಮನೆಯನ್ನು ನನಗೆ ಮಾರಿ ಹಣವನ್ನು ಪಡೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಕರಾರು ಪತ್ರವನ್ನು ಮಾಡಿಕೊಟ್ಟಿದ್ದು, ಅದನ್ನು ನೋಂದಣಿ ಮಾಡಿಸಿರುತ್ತಾರೆ.

ಪ್ರತಿವಾದಿಯು ಮಗಳ ವಿದ್ಯಾಭ್ಯಾಸಕ್ಕಾಗಿ ಕೈಸಾಲವಾಗಿ 1,50,000/- ಹಣವನ್ನು ನಿಮ್ಮಿಂದ ಪಡೆದುಕೊಂಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಕರಾರು ಪತ್ರ ಮಾಡಿಕೊಡುವ ಮುಂಚೆ 50 ಸಾವಿರ ಹಣವನ್ನು ನಿಮ್ಮಿಂದ ಪಡೆದುಕೊಂಡು ಕರಾರು ಪತ್ರದ ದಿನ ಉಳಿದ ಒಂದು ಲಕ್ಷ ಹಣವನ್ನು ಪಡೆದುಕೊಂಡಿರುತ್ತಾರೆಂದರೆ ಸಾಕ್ಷಿ ಕರಾರು ಪತ್ರ ಮಾಡಿಕೊಟ್ಟ ದಿನವೇ ಹಣವನ್ನು ಪಡೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ. ನೀವು ಪ್ರತಿವಾದಿಗೆ ನಾಲ್ಕು ಲಕ್ಷ ಹಣವನ್ನು ನೀಡಿದ ಬಗ್ಗೆ ಯಾವುದಾದರೂ ದಾಖಲಾತಿಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದು, ಮುಂದುವರಿದು ಅದನ್ನು ನೀಡುವಾಗ ಇದ್ದ ಸಾಕ್ಷಿದಾರರನ್ನು ಸಾಕ್ಷಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಪ್ರತಿವಾದಿಗೆ ಹಣ ನೀಡಿರುವ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ಕರಾರು ಪತ್ರ ಮಾಡಿಕೊಟ್ಟ ದಿನ 4 ಲಕ್ಷ ಹಣ ನಿಮ್ಮ ಹತ್ತಿರ ಇರುವ ಬಗ್ಗೆ ಯಾವುದಾದರೂ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನಾನು ವ್ಯವಹಾರ ಮಾಡುತ್ತಿದ್ದು, ಸ್ವಲ್ಪ ಹಣ ನನ್ನ ಹತ್ತಿರ ಇದ್ದು, ಇನ್ನು ಸ್ವಲ್ಪ ಹಣ ಬ್ಯಾಂಕಿನಿಂದ ತೆಗೆದುಕೊಂಡು ಬಂದಿರುತ್ತೇನೆ. 1 ಲಕ್ಷ ಹಣ ಬ್ಯಾಂಕಿನಿಂದ ಬಿಡಿಸಿಕೊಂಡು ಬಂದಿದ್ದು, ಉಳಿದ 3 ಲಕ್ಷ ನಗದು ಹಣ ಇರುತ್ತದೆ ಎಂದು ನುಡಿದಿರುತ್ತಾರೆ. ಎಲೆಕ್ಟ್ರಾನಿಕ್ ವ್ಯವಹಾರ ಬಿಟ್ಟರೆ ನನಗೆ ಬೇರೆ ಯಾವುದೇ ಆದಾಯ ಇರುವುದಿಲ್ಲ, ಸಾಕ್ಷಿ ಮುಂದುವರಿದು ಜಮೀನು ಇದ್ದು, ಅದರಲ್ಲಿ ವರ್ಷಕ್ಕೆ ಸ್ವಲ್ಪ ಆದಾಯ ಬರುತ್ತದೆ ಎಂದು ನುಡಿದಿರುತ್ತಾರೆ.

ನನ್ನ ಹತ್ತಿರ 3 ಲಕ್ಷ ನಗದು ಹಣ ವ್ಯಾಪಾರದಿಂದ ಬಂದಿರುವ ಬಗ್ಗೆ ಲೆಕ್ಕಪತ್ರಗಳನ್ನು ಇಟ್ಟುಕೊಂಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಆದಾಯ ತೆರಿಗೆ ಕಟ್ಟುತ್ತೇನೆ. ಅದರಲ್ಲಿ ನನ್ನ ಹಣಕಾಸಿನ ವ್ಯವಹಾರದ ಬಗ್ಗೆ ವಿವರಣೆ ನೀಡಿರುತ್ತೇನೆ. ಪ್ರತಿವಾದಿಗೆ ನೀಡಿದ 4 ಲಕ್ಷ ಹಣವನ್ನು ಆ ವರ್ಷದ ನನ್ನ ಐ ಟಿ ರಿಟನ್ಸ್‌ನಲ್ಲಿ ತೋರಿಸಿರುತ್ತೇನೆ. ಸದರಿ ದಾಖಲಾತಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನೀವು ಮೇಲೆ ತಿಳಿಸಿದ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಬ್ಯಾಂಕಿನ ವ್ಯವಹಾರದ ಬಗ್ಗೆ ನನಗೆ ತಿಳುವಳಿಕೆ ಇರುತ್ತದೆ. ಆದಾಯ ತೆರಿಗೆಯ ಬಗ್ಗೆ ನನಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. 20 ಸಾವಿರಕ್ಕಿಂತ ಹೆಚ್ಚು ನಗದು ಹಣವನ್ನು

ಕೊಡಬೇಕಾದ್ದಲ್ಲಿ ಅದನ್ನು ಬ್ಯಾಂಕ್ ಅಕೌಂಟ್ ಮುಖಾಂತರ ಅಥವಾ ಚೆಕ್ಕಿನ ಮುಖಾಂತರ ನೀಡಬೇಕಾಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಇದರ ಬಗ್ಗೆ ಅರಿವು ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಕರಾರು ಪತ್ರದ ಸಮಯದಲ್ಲಿ ನಾಲ್ಕು ಲಕ್ಷ ಹಣವನ್ನು ಪ್ರತಿವಾದಿಗೆ ನೀಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಆ ಸಮಯದಲ್ಲಿ ನಿಮ್ಮ ಹತ್ತಿರ ಅಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ರೂ.1,50,000 ಹಣವನ್ನು ಬೇರೆಯವರಿಂದ ಕ್ರೂಡೀಕರಿಸಿ ನೀಡಿರುತ್ತೇನೆಂದು ಅವರಿಗೆ ತಿಳಿಸಿರುತ್ತಾರಾ ಎಂದರೆ ಸಾಕ್ಷಿ ನನ್ನ ವ್ಯಾಪಾರದ ಹಣ ನೀಡಿರುತ್ತೇನೆಂದು ನುಡಿದಿರುತ್ತಾರೆ. ಮಗಳ ವಿದ್ಯಾಭ್ಯಾಸಕ್ಕೆಂದು ನಿಮ್ಮ ಹತ್ತಿರ ಪ್ರತಿವಾದಿ 1,50,000/- ಹಣವನ್ನು ಪಡೆದುಕೊಂಡಿರುತ್ತಾರೆಯೇ ಹೊರತು 4 ಲಕ್ಷ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಒಂದೂವರೆ ಲಕ್ಷ ಹಣಕ್ಕೆ ಶೇಕಡ 2 ರಂತೆ ಬಡ್ಡಿ ಪಡೆದುಕೊಂಡಿರುತ್ತಿರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಪ್ರತಿವಾದಿಗೆ ಒಂದೂವರೆ ಲಕ್ಷ ಹಣವನ್ನು ನೀಡಿರುವ ಬಗ್ಗೆ ಹಣದ ಭದ್ರತೆಗಾಗಿ ಅಡಮಾನ ಪತ್ರ ಎಂದು ಹೇಳಿ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತಿರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ನಿಪಿ-7 ರ ದಾಖಲಾತಿಯನ್ನು ಯಾವ ಉದ್ದೇಶಕ್ಕಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಬ್ಯಾಂಕಿನಿಂದ ಹಣವನ್ನು ಬಿಡಿಸಿರುವ ಬಗ್ಗೆ ಹಾಜರುಪಡಿಸಿರುತ್ತೇನೆಂದು ನುಡಿದಿರುತ್ತಾರೆ. ಆ ದಾಖಲಾತಿಯನ್ನು ಪ್ರತಿವಾದಿಗೆ ಹಣ ನೀಡಿರುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ನಾನು ಸೆಲ್ಫ್ ಡ್ರಾ ಮಾಡಿಕೊಂಡು ಬಂದಿರುತ್ತೇನೆಂದು ನುಡಿದಿರುತ್ತಾರೆ. ನಿಪಿ-7 ರ ದಾಖಲಾತಿಯ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ಆಗಲೀ, ಪ್ರಮಾಣ ಪತ್ರದಲ್ಲಿ ಆಗಲೀ

ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ-8 ರಿಂದ 20 ರವರೆಗಿನ ದಾಖಲಾತಿಗಳ ಬಗ್ಗೆ ಸಹ ಯಾವುದೇ ವಿಚಾರವನ್ನು ನಿಮ್ಮ ವಾದ ಪತ್ರದಲ್ಲಿ ಆಗಲೀ , ಪ್ರಮಾಣ ಪತ್ರದಲ್ಲಿ ಆಗಲೀ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ನಂತರ ನ್ಯಾಯಾಲಯಕ್ಕೆ ನೀಡಿರುತ್ತೇನೆಂದು ನುಡಿದಿರುತ್ತಾರೆ. ಕರಾರು ಪತ್ರ ಮಾಡಿಕೊಳ್ಳುವ ಮುಂಚೆ ಯಾವುದೇ ಲೀಗಲ್ ಒಪಿನಿಯನ್ ನ್ನು ನಾನು ಪಡೆದುಕೊಂಡಿರುವುದಿಲ್ಲ. ಕರಾರು ಪತ್ರದಲ್ಲಿ ಅಗತ್ಯ ಪಕ್ಷಗಾರರೊಂದಿಗೆ ಬಂದು ನೋಂದಣಿ ಮಾಡಿಕೊಡುತ್ತೇನೆಂದು ನಮೂದು ಮಾಡಿರುತ್ತಿರಾ ಎಂದರೆ ಸರಿ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ದಾವ ಸ್ವತ್ತನ್ನು 6 ಲಕ್ಕಕ್ಕೂ ಹೆಚ್ಚು ಹಣವನ್ನು ನೀಡಿ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.
ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**